ಡಿಸ್‌ಕನೆಕ್ಟ್ ಮಾಡಿಸುವುದಕ್ಕೆ ನಿಮಗೆ ಅಧಿಕಾರವಿದೆಯೇ? ನೀವು ಸರ್ಕಾರ ನಡೆಸುವ ರೀತಿಯೇ ಇದು.

ಅಧ್ಯಕ್ಷರು : ಆಲ್‌ರೈಟ್, ಅದರ ಬಗ್ಗೆ ಡೀಟೈಲ್ಸ್ ಏನಿದೆಯೋ ಅದನ್ನು ಕೊಡಿಸೋಣ ಬಿಡಿ. ಯೋಗೀಶ್ ಭಟ್ ಈಗ ನೀವೇನೋ ಹೇಳಬೇಕು ಎಂದಿದ್ದೀರಲ್ಲಾ, ಅದನ್ನು ಹೇಳಿ.

ಕೆ.ಪಿ.ಎಸ್.ಸಿ. ಸೆಂಟರನ್ನು ಮಂಗಳೂರಿನಲ್ಲಿ ತೆರೆಯುವುದು

ಶ್ರೀ ಎನ್. ಯೋಗೀಶ್ ಭಟ್ : ಸರ್ಕಾರ ಕೆ.ಪಿ.ಎಸ್.ಸಿ ವತಿಯಿಂದ ಕೆ.ಎ.ಎಸ್. ಪರೀಕ್ಷೆಯನ್ನು ನಡೆಸುತ್ತಿರುವುದು ಸರಿಯಷ್ಟೆ. ಈ ಪರೀಕ್ಷೆಗೆ ರಾಜ್ಯಾದ್ಯಂತ ಸಾವಿರಾರು ವಿದ್ಯಾರ್ಥಿಗಳು ಕುಳಿತಿರುತ್ತಾರೆಯಾದ ಕಾರಣ ಕೊಡಗು ಮತ್ತು ಮಲೆನಾಡಿನ ಪ್ರದೇಶಗಳ ವಿದ್ಯಾರ್ಥಿಗಳಿಗೆ ಅನುಕೂಲವಾಗಲು ಮಂಗಳೂರಿನಲ್ಲೂ ಕೂಡ ಒಂದು ಪರೀಕ್ಷಾ ಉಪಕೇಂದ್ರವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ಸರ್ಕಾರ ಅದರ ಬಗ್ಗೆ ಪರಿಶೀಲನೆಯನ್ನು ಮಾಡುತ್ತದೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಮಾಧುಸ್ವಾಮಿಯವರು ಎತ್ತಿದ ವಿಚಾರಕ್ಕೆ ಮಂತ್ರಿಗಳಿಂದ ಉತ್ತರ ಬರಲಿಲ್ಲ. ಮಂತ್ರಿಗಳೇ ಕೆ.ಇ.ಬಿ ಕಛೇರಿ ಮುಂದೆ ಧರಣಿ ಮಾಡುವುದು ಎಂದರೆ ಹೇಗೆ ಅಧ್ಯಕ್ಷರೇ, ಶಾಸಕರು ಧರಣಿ ಮಾಡುವುದನ್ನು ಎಲ್ಲರೂ ಕೇಳಿರುತ್ತಾರೆ, ಆದರೆ ಸರ್ಕಾರದ ಮಂತ್ರಿಯೇ ಹೀಗೆ ಮಾಡಿದರೆ ಹೇಗೆ? ಆದುದರಿಂದ ಅದರ ಬಗ್ಗೆ ಒಂದು ಹೇಳಿಕೆಯನ್ನು ಮಾನ್ಯ ಮಂತ್ರಿಗಳು ಕೊಡಬೇಕು.

ಅಧ್ಯಕ್ಷರು : ಮಾನ್ಯ ಸತ್ಯನಾರಾಯಣರವರೇ ಸದನಕ್ಕೆ ಬಂದಾಗ ಅದರ ಬಗ್ಗೆ ಹೇಳುತ್ತಾರೆ. ಏಕೆಂದರೆ ಅವರೇ ಧರಣಿಯನ್ನು ಮಾಡಿದರೋ ಅಥವಾ ಧರಣಿಯನ್ನು ಮಾಡುತ್ತಿದ್ದ ಜಾಗಕ್ಕೆ ಮಂತ್ರಿಗಳು ಹೋಗಿದ್ದರೋ ಎಂಬ ಬಗ್ಗೆ ಅವರನ್ನು ಕರೆಸಿ ಆಮೇಲೆ ಹೇಳಿಕೆ ಮಾಡಿಸೋಣ ಬಿಡಿ. ಇದನ್ಯಾಕೆ ಮತ್ತೆ ಚರ್ಚೆ ಮಾಡುತ್ತಾ ಹೋಗುತ್ತೀರಿ?

ಶ್ರೀ ವಾಟಾಳ್ ನಾಗರಾಜ್ : ಆಯಿತು.

ಅಧ್ಯಕ್ಷರು : ಈಗ ಬೇಡಿಕೆಗಳ ಮೇಲೆ ಮುಂದುವರಿದ ಚರ್ಚೆ. ಗೌರವಾನ್ವಿತ ಸದಸ್ಯರಾದ ರಾಜಣ್ಣನವರು ಭಾಷಣ ಪ್ರಾರಂಭ ಮಾಡಬೇಕು.

(ಶ್ರೀ ಚಂದ್ರಶೇಖರ ಎಂ. ಮಾಮನಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)